ವಿಚಾರ ಸಂಪದ

ಆಕ್ಸಿಜನ್ ಪೂರೈಕೆ ಕೊರತೆ ಎದುರಾಗದಂತೆ ಉನ್ನತಮಟ್ಟದ ಸಂಸತ್ ಸಮಿತಿ ವರದಿಯನ್ನು ಕೇಂದ್ರ ಸರ್ಕಾರ ನಿರ್ಲಕ್ಷಿಸಿದೆ. ಕ್ರಯೋಜನಿಕ್ ಟ್ಯಾಂಕರ್‌ಗಳನ್ನು ಹೆಚ್ಚಿಸಬೇಕೆನ್ನುವ ಸಲಹೆಯನ್ನು ಕಾರ್ಯಗತಗೊಳಿಸಿಲ್ಲ.
■ ಪ್ರಿಯಾಂಕಾ ಗಾಂಧಿ ವಾದ್ರಾ | ಎಐಸಿಸಿ ಪ್ರಧಾನ ಕಾರ್ಯದರ್ಶಿ

ಬರಿಗಾಲ ಹೋರಾಟದ ಭಗೀರಥನೀತ

ಮುದ್ದೇಬಿಹಾಳವು ತಾಲೂಕು ಕೇಂದ್ರವಾಗಿದ್ದರೂ ಕಳೆದ 40-50 ವರ್ಷಗಳಿಂದಲೂ ಇಲ್ಲಿನ ಜನಕ್ಕೆ ಕುಡಿಯುವ ಸಮರ್ಪಕ ನೀರಿಲ್ಲದೆ ಪರಿತಪಿಸುವಂಥ ಪರಿಸ್ಥಿತಿ. ಊರಲ್ಲಿ ಅಲ್ಲೊಂದು-ಇಲ್ಲೊಂದು ಕಾಣುವ ಬೋರ್ ವೆಲ್ ಗಳಿಗೆ ಎಲ್ಲರೂ ಮೊರೆ ಹೋಗಬೇಕಾಗಿತ್ತು. ಕೇವಲ 15 ಕಿ.ಮೀ. ದೂರದಲ್ಲಿ ಕೃಷ್ಣಾ ನದಿ ಹರಿದಿದ್ದರೂ ಇನ್ನು 25 ಕಿ.ಮೀ. ಅಂತರದಲ್ಲಿ ಅತ್ತ ಆಲಮಟ್ಟಿ ಅಣೆಕಟ್ಟು ಇತ್ತ ನಾರಾಯಣಪುರ ಡ್ಯಾಂ ಇದ್ದರೂ ಈ ಭಾಗದ ಜನಪ್ರತಿನಿಧಿಗಳ ತಾತ್ಸಾರದಿಂದ ಕುಡಿಯುವ ನೀರಿಗೆ ತತ್ವಾರ ಮುಂದುವರೆದಿತ್ತು. ನಾರಾಯಣಪುರ ಡ್ಯಾಂನ ಹಿನ್ನಿರಿಗೆ ತನ್ನೊಡಲ ಭೂಮಿ ಕಳೆದುಕೊಂಡರೂ ಮುದ್ದೇಬಿಹಾಳಕ್ಕೆ ಕುಡಿವ ನೀರಿಗೆ ಬರ. ಹೀಗಿರುವಾಗ ಊರಲ್ಲಿನ ಕೊಳವೆಬಾವಿಗಳಿಂದ ನೀರು ಹಿಡಿದುಕೊಳ್ಳಲು ಅರ್ಧ ಕಿ.ಮೀ ನಷ್ಟು ಕ್ಯೂ ನಿಲ್ಲಬೇಕಿತ್ತು. ಕೊಡಪಾನ, ಚೊಂಬು, ಪಾತ್ರೆ-ಪಗಡಗಳನ್ನು ಇಟ್ಟು ರಾತ್ರಿ-ಹಗಲೆನ್ನದೆ ಪಾಳಿ ಬರುವವರೆಗೂ ಕಾಯಬೇಕಾಗಿತ್ತು. ಅಂದು ಇದನ್ನೆಲ್ಲ ಕಣ್ಣಾರೆ ಕಂಡಿದ್ದ ಬಾಲಕ ಬಸಯ್ಯ ಮುಂದೊಂದು ದಿನ ತಾನು ದೊಡ್ಡವನಾದ ಮೇಲೆ ನೀರಿನ ಸಮಸ್ಯೆ ನಿವಾರಿಸಬೇಕೆಂದು ನಿರ್ಧರಿಸುತ್ತಾನೆ.

ಅಂದುಕೊಂಡಿದ್ದು ಆಗುವವರೆಗೆ ದೇವರ ಹೆಸರಲ್ಲಿ ಏನಾದರೊಂದು ಪದಾರ್ಥವನ್ನು ತ್ಯಜಿಸಿ ಹರಕೆ ಹೊರುವವರನ್ನು ನೋಡಿದ್ದೇವೆ. ಆದರೆ, ಇಲ್ಲೊಬ್ಬ ವ್ಯಕ್ತಿ ತನ್ನೂರಿನ ನೀರಿನ ಸಮಸ್ಯೆ ನಿವಾರಣೆಗಾಗಿ ಹರಕೆಯ ಬದಲಾಗಿ ಕುಡಿವ ನೀರಿನ ಯೋಜನೆ ಜಾರಿಯಾಗುವವರೆಗೂ ತಾನು ಬರಿಗಾಲಲ್ಲೇ ನಡೆಯುವುದಾಗಿ ಶಪಥ ಗೈಯುತ್ತಾನೆ. ಪರಿಣಾಮ ಕಳೆದ 17 ವರ್ಷಗಳಿಂದಲೂ ಚಪ್ಪಲಿ ಧರಿಸದೇ ತಿರುಗಾಡುತ್ತಿದ್ದಾನೆ. ಊರುಪಕಾರಕ್ಕಾಗಿ ತನ್ನನ್ನೇ ಹಿಂಸಿಸಿಕೊಂಡ ಆ ಹೋರಾಟಗಾರ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣದ ಬಸಯ್ಯ ನಂದಿಕೇಶ್ವರಮಠ ಅವರು.

ಕೆಲ ಯುವಕರನ್ನು ಸಂಘಟಿಸಿ 'ಮುದ್ದೇಬಿಹಾಳ ನಗರಾಭಿವೃದ್ಧಿ ಯುವ ಹೋರಾಟ ವೇದಿಕೆ'ಯನ್ನು ರಚಿಸಿಕೊಂಡು ಕುಡಿವ ನೀರಿಗಾಗಿ ನಿರಂತರ ವಿಭಿನ್ನ ಯತ್ನ ನಡೆಸುತ್ತಾರೆ. ತಲೆ ಮೇಲೆ ಭಾರವಾದ ಕಲ್ಲು ಹೊತ್ತುಕೊಂಡು ಒಂಟಿಗಾಲಲ್ಲಿ ತಹಶಿಲ್ದಾರ್ ಕಚೇರಿಯ ಮುಂದೆ ನಿಲ್ಲುತ್ತಾರೆ. ಊರತುಂಬ ಉರುಳು ಸೇವೆ ಮಾಡುತ್ತಾರೆ. ಕುಡಿವ ನೀರಿಗಾಗಿ ಮನೆ ಮನೆಗೆ ತೆರಳಿ ಭಿಕ್ಷೆ ಬೇಡುತ್ತಾರೆ. ಇದಾವುದೂ ಪ್ರಯೋಜನವಾಗದಿದ್ದಾಗ ಡಿಸಿಯವರ ಗಮನ ಸೆಳೆಯಲೆಂದು ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿಗೆ ತಮ್ಮ ಹೋರಾಟವನ್ನು ಸ್ಥಳಾಂತರಿಸಿ ಅಲ್ಲಿಯೂ 13 ದಿನಗಳ ಕಾಲ ತಲೆಯ ಮೇಲೆ ಕಲ್ಲು ಹೊತ್ತುಕೊಂಡು ನಿಲ್ಲುತ್ತಾರೆ. ಇವರ ಈ ನಿಸ್ವಾರ್ಥ ಹೋರಾಟ ಮಾಧ್ಯಮಗಳಲ್ಲಿ ವರದಿಯಾಗುತ್ತದೆ.

ಅಧಿಕಾರಿಗಳ ಬೆನ್ನು ಹತ್ತಲೆಂದು ಬೆಂಗಳೂರು ಮಟ್ಟದಲ್ಲಿ ಓಡಾಟ ಆರಂಭಿಸುತ್ತಾರೆ. ಮಾಜಿ ಸಚಿವೆ ನಾಲತವಾಡದ ವಿಮಲಾಬಾಯಿ ದೇಶಮುಖ ಅವರ ನೆರವಿನಿಂದ ಅಂದಿನ ಮುಖ್ಯಮಂತ್ರಿಗಳಾದ ಧರಂಸಿಂಗ್, ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿಯಾದ ಪರಿಣಾಮ ಕುಡಿವ ನೀರಿನ ಯೋಜನೆ ಮಂಜೂರು. 13.83 ಕೋಟಿ ಮೊತ್ತದ ಮುದ್ದೇಬಿಹಾಳದಿಂದ 13 ಕಿ.ಮೀ. ಅಂತರದಲ್ಲಿರುವ ದೇವೂರು ಬಳಿ ಹರಿದಿರುವ ಕೃಷ್ಣಾ ನದಿಯಿಂದ ಜಾಕ್ ವೆಲ್ ಮೂಲಕ ನೀರು ಹರಿಸುವ ಯೋಜನೆ ಕಾಮಗಾರಿ ಪೂರ್ಣಗೊಳ್ಳುತ್ತದೆ.

ಮುಂದೆ ಅಂದಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಂದ ಉದ್ಘಾಟನೆ ಕಾರ್ಯವೂ ನೆರವೇರುತ್ತದೆ. ಆದರೆ, ರಾಜಕೀಯ ನಾಯಕರ ಚಿತಾವಣೆಯಿಂದಾಗಿ ಈ ವೇಳೆ ಬಸಯ್ಯನವರು ಹಿಂದೆ ಸರಿಯುವಂತಾಗುತ್ತದೆ. ಆದರೆ, ಇವರ ಹಿಂದೆ ಇದ್ದ ಸ್ಥಳೀಯ ಜನ ಪುರಸಭೆ ಚುನಾವಣೆಗೆ ನಿಲ್ಲಿಸಿ ಬಸಯ್ಯರನ್ನು ಗೆಲ್ಲಿಸಿ ಆದರಿಸುತ್ತಾರೆ.

ಬರಿಗಾಲ ಹೋರಾಟದ ಬಸಯ್ಯನವರ ಬೇಡಿಕೆ ಕಳೆದ 7-8 ವರ್ಷಗಳ ಹಿಂದೆಯೇ ಈಡೇರಿದೆ. ಆ ಮೂಲಕ ಮುದ್ದೇಬಿಹಾಳ ನೀರಿನ ಸಮಸ್ಯೆಯೂ ನಿವಾರಣೆಯಾದಂತಾಗಿದೆ. ಆದರೆ, ಬಸಯ್ಯನವರ ಬರಿಗಾಲಿಗೆ ಪಾದರಕ್ಷೆ ತೊಡಿಸುವ ಕಾರ್ಯ ಮಾತ್ರ ಇನ್ನೂ ಬಾಕಿ ಉಳಿದಿದೆ. ಹೆಜ್ಜೆ ಇಟ್ಟಾಗಲೊಮ್ಮೆ ಹೋರಾಟ ನೆನಪಾಗಬೇಕೆಂದು ಚಪ್ಪಲಿ ಹಾಕುವುದನ್ನೇ ಬಿಟ್ಟಿದ್ದ ಇವರ ತ್ಯಾಗವನ್ನು ನೀರು ಕುಡಿಯುವಾಗೊಮ್ಮೆ ನೆನೆಯದಿದ್ದರೂ ಪರವಾಗಿಲ್ಲ. ಬಸಯ್ಯನವರ ಬರಿಗಾಲ ನಡಿಗೆಯನ್ನು ಮರೆಯುವುದೆಂದರೆ ಎಷ್ಟು ಸರಿ?

ಹಳಸುವ ಮುನ್ನ ಹಸಿದ ಹೊಟ್ಟೆಗೆ ಅನ್ನ

ಒಂದು ಕಡೆ ತುತ್ತು ಅನ್ನಕ್ಕಾಗಿ ಹಪಹಪಿಸುವ ಅದೆಷ್ಟೋ ಅನಾಥರು, ನಿರ್ಗತಿಕರು. ಮತ್ತೊಂದು ಕಡೆ ಚರಂಡಿ ಪಾಲಾಗುವ ಬೇಡವಾಗಿ ಉಳಿದ ಆಹಾರ ಪದಾರ್ಥ. ಕಷ್ಟಪಟ್ಟು ಬೆವರು ಸುರಿಸಿ ರೈತ ಬೆಳೆದ ಆಹಾರ ಹಸಿದವರ ಹೊಟ್ಟೆಗೂ ಸೇರದೆ ವ್ಯರ್ಥವಾಗಿ ಹಾಳಾಗಬಾರದೆಂದು ಯೋಚಿಸಿದ ಪರಿಣಾಮವೇ 'ರಿಶೈನ್ ಆರ್ಗನೈಜೇಶನ್' ಎಂಬ ಎನ್‌ಜಿಓವೊಂದರ ಹುಟ್ಟಿಗೆ ಕಾರಣ. ಹಾಳಾಗಲಿರುವ ಅನ್ನ ಹಾಗೂ ಹಸಿದ ಹೊಟ್ಟೆಯ ನಡುವಿನ ಕೊಂಡಿಯಂತೆ ಸ್ವಯಂ ಪ್ರೇರಿತನಾಗಿ ಕೆಲಸ ಮಾಡಲು ಮುಂದಾದ ಆ ಯುವಕ ಮತ್ತು ರಿಶೈನ್ ನ ಜನಕ ಬೀದರ್ ನ ರೋಹನ್ ಅವರು.

ಅದೊಂದು ದಿನ ರೈಲ್ವೆ ಸ್ಟೇಷನ್ ನ ಬಳಿಯ ಕಸದ ತೊಟ್ಟಿಗೆ ಯಾರೊ ಒಬ್ಬರೂ ಅನ್ನ ತಂದು ಬಿಸಾಕಿ ಹೋಗುತ್ತಾರೆ. ಇದನ್ನೇ ಕಾಯುವಂತಿದ್ದ ಒಂದಷ್ಟು ಮಕ್ಕಳು ತೊಟ್ಟಿಗೆ ಮುತ್ತಿಗೆ ಹಾಕಿದವರಂತೆ ಮುಗಿಬಿದ್ದು ಕಸದಿಂದ ಬೇರ್ಪಡಿಸಿಕೊಂಡು ಕೈಗೆ ಸಿಕ್ಕಷ್ಟು ಅನ್ನವನ್ನು ಬಾಯಿಗೆ ಹಾಕಿಕೊಳ್ಳುತ್ತಾರೆ. ಇದನ್ನು ಕಣ್ಣಾರೆ ನೋಡಿದ ರೋಹನ್ ಕರುಳು ಕಿವುಚಿದಂತಾಗಿ ಮಮ್ಮಲ ಮರಗುತ್ತಾರೆ. ನಾವೆಲ್ಲ ತಿಂದುಂಡು ಬಿಸಾಕುವ ಎಂಜಲನ್ನಕ್ಕೇ ಹಂಬಲಿಸಿ ಹಲುಬುವವರಿದ್ದಾರೆ. ತಾನು ಇಂಥವರಿಗಾಗಿ ಏನಾದರೂ ಮಾಡಬೇಕಲ್ಲವೆ? ಎಂದು ಯೋಚಿಸುವಂತಾಗುತ್ತದೆ.

ಮದುವೆ ಮುಂಜಿವೆ ಮುಗಿದ ಮೇಲೆ ಉಳಿದಂತಹ ಅಪಾರ ಪ್ರಮಾಣದ ಅಡುಗೆಯನ್ನು ಬಿಸಾಡುವ ಬದಲಾಗಿ ಇಂಥ ಹಸಿದ ಹೊಟ್ಟೆಗೆ ಹಾಕುವಂತಾದಾದರೆ, ಒಂದೋ ಆಹಾರ ಪದಾರ್ಥಗಳು ವ್ಯರ್ಥವಾಗುವುದನ್ನು ತಡೆದಂತಾಗುತ್ತದೆ. ಮತ್ತೊಂದು ಅನಾಥ, ನಿರ್ಗತಿಕರಿಗೆ ಊಟ ಹಾಕಿದ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದುಕೊಂಡವನೇ ಒಂದೊಳ್ಳೆ ಕೆಲಸದ ಹಿಂದೆ ಬೀಳುತ್ತಾನೆ.

ಈತನ ಈ ನಿಸ್ವಾರ್ಥ ಕೆಲಸಕ್ಕೆ ಕೈಜೋಡಿಸಲೆಂದು ಮುಂದೆ ಬಂದ ಗೆಳೆಯರೇ ಕಾರ್ತಿಕ್ ಆಲೂರೆ, ಸ್ಟೀಫನ್ ಪೌಲ್, ಸಚಿನ್ ಕೆಂಚಾ, ಶುರುಫ್ ಅಹಮದ್, ಶೋಯಬ್ ಉದ್-ದೀನ್, ಫ್ರಾಂಕ್ಲಿನ್, ಸಾಗರ್ ಪಾಟೀಲ್ ಮತ್ತು ಪುಟ್ಟರಾಜ್ ಅವರುಗಳು.

ಆರಂಭದಲ್ಲಿ ಆಟೋವೊಂದನ್ನು ಬಾಡಿಗೆಗೆ ಪಡೆದು ಮದುವೆ ಮಂಟಪ, ಚೌಟ್ರಿಗಳಿಗೆ ತೆರಳಿ ಹೆಚ್ಚಾಗಿ ಉಳಿದಂಥ ಅನ್ನ, ಸಾಂಬಾರು, ಚಪಾತಿ, ಪಲ್ಯ ಸೇರಿದಂತೆ ಮೊದಲಾದ ಅಡುಗೆಯನ್ನು ಸಂಗ್ರಹಿಸಿ ಒಂದೊಂದು ಪಾತ್ರೆಯಲ್ಲಿ ತುಂಬಿಕೊಂಡು ಬಂದು, ಅದೇ ಆಟೋವನ್ನು ಅನಾಥರು, ಭಿಕ್ಷುಕರು ಇರುವ ಜಾಗಗಳನ್ನು ಹುಡುಕಿಕೊಂಡು ಹೋಗಿ ಹಂಚುವ ಕಾರ್ಯಕ್ಕಿಳಿಯುತ್ತಾರೆ. ಇದಕ್ಕಾಗಿ ತಗಲುವ ಖರ್ಚನ್ನು ಇವರೇ ಭರಿಸುತ್ತಾರೆ.

ಈ ಹುಡುಗರ ನಿಸ್ವಾರ್ಥ ಮನೋಭಾವನೆಯ ಕೆಲಸವನ್ನು ಗಮನಿಸಿದ ಜಗನ್ನಾಥ್ ರೆಡ್ಡಿ ಎಂಬವರು ತಮ್ಮ ಮಗಳು ಭಾಗ್ಯಶ್ರೀ ಹೆಸರಲ್ಲಿ, ಮತ್ತೊಬ್ಬ ಆರ್.ಟಿ.ಓ ಅಧಿಕಾರಿ ಜಫರ್ ಸಿದ್ದಿಕ್ ಅವರು ತಾವು ಉಪಯೋಗಿಸುತ್ತಿದ್ದ ಮಾರುತಿ ಓಮ್ನಿ ವಾಹನವನ್ನು 'ರಿಶೈನ್ ಆರ್ಗನೈಸೇಶನ್'ಗೆ ಉಡುಗೊರೆಯಾಗಿ ನೀಡುತ್ತಾರೆ. ಇದರಿಂದಾಗಿ ಉತ್ತೇಜಿತರಾದ ರೋಹನ್ ಮತ್ತವರ ತಂಡಕ್ಕೆ ಹಸಿದವರಿಗೆ ಆಹಾರ ಪೊಟ್ಟಣಗಳನ್ನು ತಲುಪಿಸಲು ಊರು ಸುತ್ತು ಹಾಕುವುದೇ ಒಂದು ಹವ್ಯಾಸವಾಗುತ್ತದೆ.

ಮದುವೆ ಊಟ ಸಿಗದಿದ್ದಾಗ ಹೊಟೇಲ್ ನಲ್ಲಿ ಉಳಿದಂಥ ಅನ್ನಕ್ಕೆ ಮೊರೆಯಿಡುತ್ತಾರೆ. ಹಾಗಂತ ಇವರಾರೂ ಖಾಲಿಪೀಲಿ ಹುಡುಗರಲ್ಲ. ಇವರಲ್ಲಿ ಡಾಕ್ಟರ್, ಇಂಜಿನಿಯರ್, ಸ್ವಂತ ಬಿಜಿನೆಸ್ ಮಾಡುವವರೂ ಇದ್ದಾರೆ. ಅಳಿದುಳಿದ ಅನ್ನ ಕೊಡುವವರಿಗೂ ಕೃತಜ್ಞತೆಯ ನೆಪದಲ್ಲಿ ಸಸಿಗಳನ್ನು ನೀಡುವ ಮೂಲಕ ಪರಿಸರ ಕಾಳಜಿ ಮೂಡಿಸುತ್ತಿರುವ ರಿಶೈನ್ ನ ಈ ಹುಡುಗರು ತಮ್ಮ ಈ ಕಾರ್ಯದಲ್ಲಿ ಇನ್ನಷ್ಟು ಶೈನ್ ಆಗಲು ಶಹಬ್ಬಾಶ್ ಎನ್ನಲೇಬೇಕು.

ನುಡಿಚಿತ್ರ
ಚೆನ್ನವೀರ ಸಗರನಾಳ

ಪೊಲೀಸಪ್ಪನ ಪರಿಸರ ಪ್ರೀತಿಗೆ ಹಸಿರಾದ ಗುಡ್ಡ

ಅದೇಕೋ ಹಾಲೇಶ್ ಗೆ ಮೊದಲಿನಿಂದಲೂ ಹಸಿರು ಕಂಡರೆ ವ್ಯಾಮೋಹ. ಶಾಲಾ ಕಾಲೇಜು ದಿನಗಳಲ್ಲೇ ಪರಿಸರ ಮತ್ತು ಅದರ ಮಹತ್ವದ ಬಗ್ಗೆ ಹೆಚ್ಚು ಗಮನವನ್ನು ಹರಿಸುತ್ತಿದ್ದ ಇವರು ಅಂದಿನಿಂದಲೂ ಪರಿಸರ ಕಾಳಜಿಯನ್ನು ಮೈಗೂಡಿಸಿಕೊಂಡಿದ್ದಾರೆ.

ಲಾಠಿ ಬೀಸುತ್ತಾ ಕಳ್ಳ-ಕಾಕರನ್ನು ಹಿಡಿಯುವ ಈ ಪೊಲೀಸಪ್ಪ ಹತ್ತಿರದ ಬೋಳು ಗುಡ್ಡವನ್ನು ಹತ್ತಿ ಗಿಡಗಳಿಗೆ ನೀರುಣಿಸುವುದು ಕಾಯಕ ಮಾಡಿಕೊಂಡಿದ್ದಾರೆ. ಠಾಣೆಯ ಕೆಲಸ ಆರಂಭಕ್ಕೂ ಮುನ್ನವೇ ತಾನೇ ಬೆಳೆಸಿದ ಗಿಡ ಮರಗಳ ರಕ್ಷಣೆ ಕಾರ್ಯಕ್ಕಿಳಿಯುವ ಆರಕ್ಷಕ ಪರಿಸರ ಸಂರಕ್ಷಕರೆನ್ನಿಸಿದ್ದಾರೆ. ಉಸಿರಿಗಿಂತಲೂ ಹೆಚ್ಚು ಪ್ರೀತಿಸುವ ಹಸಿರು ಹುಚ್ಚು ಹಿಡಿಸಿಕೊಂಡ ಖಾಕಿಧಾರಿ ಕಾನ್ಸ್ಟೇಬಲ್ ಶಿವಮೊಗ್ಗ ನಗರದ ಕೋಟೆ ಸ್ಟೇಷನ್ ನ ಹಾಲೇಶ್ ಎಸ್. ಅವರು.

ಬಡತನದಲ್ಲೇ ಬೆಳೆದ ಹಾಲೇಶ್ ಡಿಗ್ರಿವರೆಗೂ ಓದಿದ್ದರೂ ಸಿಕ್ಕ ಸರ್ಕಾರಿ ಕೆಲಸವನ್ನು ಶಿರಸಾವಹಿಸಿ ಮಾಡುವುದರೊಂದಿಗೆ ಮರ ಬೆಳೆಸುವುದನ್ನು ರೂಢಿಸಿಕೊಂಡಿದ್ದು ಮನ ಸಂತೃಪ್ತಿಗಾಗಿ.

ಭದ್ರಾವತಿ ತಾಲೂಕಿನ ಢಣಾಯಕಪುರ ಮೂಲದ ಹಾಲೇಶ್ ಅವರಿಗೆ ತಮ್ಮ ಊರಿನಿಂದ ಕೂಗಳತೆ ದೂರದಲ್ಲಿರುವ ಬಯಲು ಗುಡ್ಡವೇ ಕಾರ್ಯಕ್ಷೇತ್ರ. ಈಗ್ಗೆ ಐದು ವರ್ಷಗಳ ಹಿಂದೆ ಈ ಬೋಳುಗುಡ್ಡದಲ್ಲಿ ಇವರು ಗಿಡ ನೆಡಲಾರಂಭಿಸಿದರು. ಗುಡ್ಡದಲ್ಲಿ ಗುಂಡಿಗಳನ್ನು ತೋಡಿ ಗಿಡಗಳನ್ನು ನೆಟ್ಟು ಯಾವುದೇ ಪ್ರಾಣಿ ಪಕ್ಷಿಗಳು ತಿನ್ನದಂತೆ ಬಿದಿರಿನ ಹೊದಿಕೆಯಿಂದ ರಕ್ಷಣೆ ಮಾಡುತ್ತಾರೆ. ಬಳಿಕ ಗುಡ್ಡದ ಬಳಿಯೇ ಹರಿದಿರುವ ತುಂಗ ಭದ್ರ ನದಿಯಿಂದ ನೀರು ಹೊತ್ತೊಯ್ದು ಗಿಡಗಳಿಗೆ ಹಾಕುತ್ತಾರೆ.

ಪ್ರತಿ ವರ್ಷವೂ 300-500 ನಾನಾ ರೀತಿಯ ಗಿಡಗಳನ್ನು ನೆಟ್ಟು ಬೆಳೆಸಿದ ಪರಿಣಾಮ ಇದೀಗ ಈ ಬೋಳು ಮುಖದ ಗುಡ್ಡ ಸಹಸ್ರ ವೃಕ್ಷಗಳಿಂದ ತುಂಬಿ ಹಸಿರಾಗಿ ನಳನಳಿಸುವಂತಾಗಿದೆ. ಗಿಡಗಳನ್ನು ನೆಡಲು ಅವುಗಳಿಗೆ ನೀರುಣಿಸಲು ಕೂಲಿಯವರಿಗೆ ಕೊಡುವ ದುಡ್ಡು ಹಾಲೇಶ್ ಜೇಬಿನಿಂದಲೇ. ಇವರ ಈ ಕಾರ್ಯವನ್ನು ಕಣ್ಣಾರೆ ಕಂಡವರು ದಂಗಾಗಿದ್ದರೆ ಇನ್ನು ಕೆಲವರು ಈತನಿಗೆ ಹುಚ್ಚು ಹಿಡಿದಿರಬೇಕೆಂದು ಆಡಿಕೊಂಡಿದ್ದುಂಟು. ಅದಾವುದಕ್ಕೂ ಕಿವಿಗೊಡದ ಹಾಲೇಶ್ ಪರಿಸರ ದೇವತೆಗೆ ಈ ಮೂಲಕ ಹಾಲೆರೆಯುವ ಕೆಲಸವನ್ನು ಕೈ ಬಿಟ್ಟವರೇ ಅಲ್ಲ.

ಮೊದ ಮೊದಲು ಇವರ ಪರಿಸರದ ಮೇಲಿನ ಈ ಪರಿಯ ಹುಚ್ಚು ಕಂಡು ಸ್ವತ: ಇವರ ತಾಯಿ, ಪತ್ನಿಯವರೇ ಬೇಸರಿಕೊಂಡಿದ್ದರಂತೆ. ಯಾವಾಗ ಹಾಲೇಶ್ ಅವರು ಗಿಡ ನೆಡುವುದನ್ನೇ ಒಂದು ವ್ರತವನ್ನಾಗಿ ಮಾಡಿಕೊಂಡರೋ ಆಗ ಅನಿವಾರ್ಯವಾಗಿ ಮನೆಯವರೂ ಕೈ ಜೋಡಿಸಬೇಕಾಯ್ತು. ಹಾಲೇಶರ ಸಮಾಜ ಸೇವೆ ರಕ್ತದಾನದವರೆಗೂ ಮುಂದುವರಿದಿದೆ. ಯಾವ ಫಲಾಪೇಕ್ಷೆ ಇಲ್ಲದೆ ಗಿಡ-ಮರಗಳನ್ನು ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ಗಾಳಿ, ನೆರಳು ಸಿಗುವಂತಾಗಲು ಕಾರಣೀಭೂತರಾದ ಹಾಲೇಶ್ ಅಂಥವರಿಗೆ ಬೆನ್ನುತಟ್ಟಬೇಕೇ ಹೊರತು ಬೆನ್ನ ಹಿಂದೆ ಮಾತನಾಡಬಾರದು. ಜೊತೆಗೆ ಪರಿಸರ ಅರಣ್ಯ ಇಲಾಖೆಯವರು ಹಾಲೇಶ್ ಅವರ ಸಮಾಜಮುಖಿ ಕಾರ್ಯಕ್ಕೆ ಕೈ ಜೋಡಿಸಬೇಕು.

ವೈದ್ಯೋ ನಾರಾಯಣೋ ಹರಿಃ

ಪ್ರೊ. ಶ್ರೀನಿವಾಸ ಬಳ್ಳಿ
ಕುಲಪತಿಗಳು
ನೃಪತುಂಗ ವಿಶ್ವವಿದ್ಯಾಲಯ
ಮುಖಾಮುಖಿ

ಕರೋನಾ ಮಹಾಮಾರಿಯ ಮರ್ಮಾಘಾತಕ್ಕೆ ಇಡೀ ಜಗತ್ತು ನರಳುತ್ತಿದೆ. ಪ್ರತಿನಿತ್ಯ ಲಕ್ಷಾಂತರ ಜನ ಸೋಂಕಿಗೊಳಗಾಗುತ್ತಿದ್ದಾರೆ. ಹತ್ತಾರು ಸಾವಿರ ಜನ ಸಾಯುತ್ತಿದ್ದಾರೆ. ವೆಂಟಿಲೇಟರ್, ಆಮ್ಲಜನಕ, ಹಾಸಿಗೆ, ಚಿಕಿತ್ಸೆ ದೊರೆಯದೇ ಸೋಂಕಿತರ ಮತ್ತು ಅವರ ಸಂಬಂಧಿಕರ ಆತಂಕ ಹೆಚ್ಚಿದೆ. ಅಂತ್ಯ ಸಂಸ್ಕಾರಕ್ಕೂ ಉದ್ದುದ್ದ ಸರತಿಸಾಲಿನಲ್ಲಿ ನಿಲ್ಲುವಂತಾಗಿದೆ. ಹೆಣ ಸುಡಲೂ ಲಂಚಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸುಖ, ಸಂಪತ್ತು, ದೌಲತ್ತು, ಆಸಂಖ್ಯಾತ ಸಂಬಂಧಿಕರು, ಮಿತ್ರರು ಇರುವಾಗಲೂ ಸಾಯುವ ಘಳಿಗೆಯಲ್ಲಿ ಏನೂ ಮತ್ತು ಯಾರೂ ಇರದ ಅನಾಥನಂತಹ ಪರಿಸ್ಥಿತಿ ತಲೆದೋರಿದೆ. ಹೆತ್ತಮಗ ಕಿಚ್ಚಿಡಲಾರದ, ಕಟ್ಟಿಕೊಂಡ ಹೆಂಡತಿ ಹನಿ ನೀರು ಬಿಡಲಾಗದ, ನೆಚ್ಚಿಕೊಂಡ ಸಂಬಂಧಿಕರು ಶವಸಂಸ್ಕಾರಕ್ಕೆ ಬಾರದ ಅನಿವಾರ್ಯತೆ ಉಂಟಾಗಿದೆ.

ವೈದ್ಯೋ ನಾರಾಯಣೋ ಹರಿಃ ಎಂದ ನಮ್ಮ ದೇಶದಲ್ಲಿ ಕೆಲವು ವೈದ್ಯರುಗಳು ಸುಲಿಗೆಗೆ ನಿಂತಿದ್ದಾರೆ. ಅಸಹಾಯಕ ಪರಿಸ್ಥಿತಿಯ ಲಾಭ ಪಡೆದು ಹಣ ಸಂಪಾದಿಸುವ ಹೊಂಚು ಹಾಕಿದ್ದಾರೆ. ಸಾಧ್ಯವಾದಷ್ಟು ಬೇಗ ಸಾಧ್ಯವಾದಷ್ಟು ಹೆಚ್ಚು ಹಣ ಗುಡ್ಡೆ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. Isolation, Quarantine, Vaccination and Immunity ಹೆಚ್ಚಿಸುವ ಹೆಸರಿನಲ್ಲಿ ಹಾಗು ಹೇಗ್ಹೇಗೆ ಸಾಧ್ಯವಿದೆಯೊ ಹಾಗೆಲ್ಲ ಹಣವನ್ನು ಸೆಳೆಯುವ ಹುನ್ನಾರ ಅವರದು. ಬೇರೆಯದೇ ಕಾರಣಕ್ಕೆ ಸತ್ತರೂ ಕರೋನಾನೇ ಕಾರಣ ಎಂದು ಬಿಂಬಿಸಿ ಸರ್ಕಾರದ ಹಣವನ್ನು ಕಬಳಿಸುವ ಅಡ್ಡ ದಾರಿ ಹುಡುಕಿಕೊಂಡಿದ್ದಾರೆ. ಬೆಡ್‌ಗಳನ್ನು ಸುಳ್ಳು ಹೆಸರಿನಲ್ಲಿ ಬುಕ್ಕಿಂಗ್ ಮಾಡಿ ಉಳ್ಳವರಿಗೆ ಮಾರಿಕೊಳ್ಳುವ ದಂಧೆಯನ್ನು ನಡೆಸುತ್ತಿದ್ದಾರೆ. ಇದಕ್ಕೆಲ್ಲ ಕಾರಣ ಏನು?

ಶಿಕ್ಷಣದ ವ್ಯಾಪಾರೀಕರಣದಿಂದಾಗಿ ವೈದ್ಯಕೀಯ ಶಿಕ್ಷಣವನ್ನು ಹೆಚ್ಚಿನ ಹಣ (Donation) ಕೊಟ್ಟು ಸೀಟು ಪಡೆದ ಡಾಕ್ಟರುಗಳು ತಾವು ತೊಡಗಿಸಿದ್ದ ಬಂಡವಾಳವನ್ನು ಮರಳಿ ಪಡೆದುಕೊಳ್ಳಲು ವಸೂಲಿಗೆ ನಿಲ್ಲುತ್ತಾರೆ. ಹಣ ಡಿಪಾಜಿಟ್ ಮಾಡದ ಹೊರತು ಅಡ್ಮಿಟ್ ಮಾಡಿಕೊಳ್ಳುವುದೇ ಇಲ್ಲ. ಬೇಕಾಗಿಯೋ ಬೇಕಿಲ್ಲದೆಯೋ ವಿವಿಧ ತೆರನಾದ ಟೆಸ್ಟ್‌ಗಳನ್ನು ಮಾಡಿಸುವಂತೆ ಹೇಳುತ್ತಾರೆ. ರೋಗಿ ಆಸ್ಪತ್ರೆ ಪ್ರವೇಶಿಸುತ್ತಿದ್ದಂತೆ ಎಲ್ಲ ತರಹದ ಚಿಕಿತ್ಸೆ, ಆಪರೇಶನ್ ಇತ್ಯಾದಿಗಳಿಗೆ ಮತ್ತು ಮುಂದಾಗುವ ಏನಕ್ಕೂ ಆಸ್ಪತ್ರೆಯಲ್ಲ, ನಾನೇ ಹೊಣೆ ಎನ್ನುವ ರೀತಿಯಲ್ಲಿ ಲಿಖಿತ ಪತ್ರಕ್ಕೆ ಸಹಿ ಹಾಕಿಸಿಕ